# I Semester B.A./B.H.M. Examination, November/December 2010
## (Freshers Scheme)
## ಕನ್ನಡ ಭಾಷಾ ಪತ್ರಿಕೆ - 1
## ಸಾಹಿತ್ಯ ಸಮನ್ವಯ - ೧ ಮತ್ತು ಮೀಡಿಯ

Time : 3 Hours  Max. Marks : 90

I. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ : **(10×1=10)**

1) ಪಂಪ ಬರೆದಿರುವ ಎರಡು ಕಾವ್ಯಗಳನ್ನು ಹೆಸರಿಸಿ.
2) ಕರ್ಣನ ದೃಷ್ಟಿಯಲ್ಲಿ ವೀರಪಟ್ಟ ಯಾವುದಕ್ಕೆ ಸಮನಾಗಿತ್ತು ?
3) ದ್ರೌಪದಿಯನ್ನು ಕರೆತರಲು ಮೊದಲು ಹೋದವರು ಯಾರು ?
4) ಲಿಂಗನ ಬಲಗಾಲು, ಎಡಗಾಲಿಗಿಂತ ಏನಾಗಿತ್ತು ?
5) ಬಸಲಿಂಗನ ಹೆಂಡತಿಯ ಹೆಸರೇನು ?
6) ಎಲ್ಲಾ ಕಲಾಭಿವ್ಯಕ್ತಿಗಳಿಗೂ ಮೂಲದ್ರವ್ಯ ಯಾವುದು ?
7) ಹೆಂಗಸರ ಹಕ್ಕೊತ್ತಾಯ ಯಾವುದಿರಬೇಕು ಎಂದು ಲೇಖಕಿ ಬಯಸುತ್ತಾರೆ ?
8) ದೂಷಿಸುವರ ಕಣ್ಣಿಗೆ ಯಾವುದು ಕಾಣುವುದಿಲ್ಲ ?
9) ಕ್ರೆಯಾನ್‌ನ ಮೃದು ಹೃದಯ ಹಲವು ಬಾರಿ ಏನು ಮಾಡಿದೆ ?
10) ಮೀಡಿಯಳ ಆಸೆಗಳ ಬಂದರಿನಂತೆ ಕಾಣಿಸಿಕೊಂಡವರು ಯಾರು ?

II. ಯಾವುದಾದರೂ ಐದಕ್ಕೆ ಟಿಪ್ಪಣಿ ಬರೆಯಿರಿ : **(5×2=10)**

1) ಚಂಪೂ
2) ಹರಿಹರ
3) ವೀರಪಟ್ಟ
4) ಶಕುನಿ
5) ಅಪ್ರೊದಿತೆ
6) ಮೇಳ
7) ಸಣ್ಣಕತೆ
8) ಏಜಿಯಸ್

III. ಯಾವುದಾದರೂ ಒಂದು ಕಾವ್ಯಭಾಗದ ವಿಶ್ಲೇಷಣೆ ಮಾಡಿ. **(1×6=6)**

1) ಗಿಳಿಯ ಮೆಲು ನುಡಿಗಳ ವಿನೋದದಿ
ಕೆಲರು ವೀಣಾಧ್ವನಿಯ ರಹಿಯಲಿ
ಕೆಲರು ಸರಸ ಸುಗಂಧ ಸಂಗೀತದ ಸಮಾಧಿಯಲಿ
ಕೆಲರು ನೆತ್ತದಲಮಳ ಮುಕ್ತಾ
ವಳಿಯ ಚೆಲುವಿನ ಚದುರೆಯರು ಕಂ
ಗೊಳಿಸಿತ ಬೆಲೆಯ ಮಣಿಯ ಮಂಚದ ಸುತ್ತುವಳೆಯದಲಿ

2) ಸಿಂಗದ ಮುಪ್ಪುಂ ನೆಗಟ್ದೀ
ಗಾಂಗೇಯರ ಮುಪ್ಪುಮಿಟಿಕೆ ವಡೆಗುವೆಂ ವನಮಾ
ತಂಗಳಿನಸುಹೃಚ್ಚತು
ರಂಗ ಬಲಂಗಳಿನದೆಂತು ಮಂಗಾಧಿಪತೀ

IV. ಆರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(6×4=24)**

1) ಕರ್ಣ ದ್ರೋಣರ ವಾಗ್ವಾದದಲ್ಲಿ ಕುಲದ ವ್ಯಾಖ್ಯಾನ ಹೇಗೆ ಮೂಡಿ ಬಂದಿದೆ ?
2) ಕಣ್ಣಪ್ಪನ ಪೂಜಾ ವಿಧಾನದ ಬಗ್ಗೆ ಶಿವ ಪಾರ್ವತಿಯರಲ್ಲಿ ನಡೆದ ಮಾತುಕತೆಯ ಸ್ವಾರಸ್ಯವೇನು ?
3) 'ಸಿಡಿಲ ಪೊಟ್ಟಣಗಟ್ಟಿ ಸೇಕವ ಕೊಡುವರೇ' ಎಂದವರು ಯಾರು ? ಹಾಗೆ ಹೇಳಲು ಕಾರಣವೇನು ?
4) ಒಡೆಯರ ಕುಟುಂಬವನ್ನು ರಕ್ಷಿಸಲು ಲಿಂಗ ಮಾಡಿದ ತ್ಯಾಗವೇನು ?
5) ಡಾ. ತಿಮ್ಮಪ್ಪನವರ ಬಗ್ಗೆ ಬಸಲಿಂಗ ಬಳಸಿಕೊಂಡ ಪೂರ್ವಾಗ್ರಹವೇನು ?
6) 'ದುರ್ಯೋಧನ ಅಂತರ್ಮುಖತೆ ಮತ್ತು ಬಹಿರ್ಮುಖತೆಗಳ ನಡುವೆ ಸೆಣಸಾಡುವ ಒಬ್ಬ ಮನುಷ್ಯ' ಎಂಬುದನ್ನು ಬರಗೂರರು ವಿವರಿಸಿರುವ ಕ್ರಮ ಹೇಗಿದೆ ?
7) ಆಕ್ರೋಶದಿಂದ ಕುದಿಯುವ ಮೀಡಿಯಾಳನ್ನು ಮೇಳದವರು ಸಮಾಧಾನಪಡಿಸುವ ರೀತಿಯನ್ನು ವಿವರಿಸಿ.
8) ಮೀಡಿಯಾ ಮತ್ತು ಜೇಸನ್ ನಡುವೆ ನಡೆದ ಸಂಭಾಷಣೆಯ ಸಂಘರ್ಷವನ್ನು ಕುರಿತು ಬರೆಯಿರಿ.

V. ಎಲ್ಲಾ ಪ್ರಶ್ನೆಗಳಿಗೂ ವಿಮರ್ಶಾತ್ಮಕವಾಗಿ ಉತ್ತರಿಸಿ. **(4×10=40)**

1) ತನ್ನನ್ನು ಸೋತ ಧರ್ಮರಾಯನ ಮೂಲಕ ದ್ರೌಪದಿ ಕೌರವರ ಸಭೆಗೆ ಹಾಕಿದ ಪ್ರಶ್ನೆಯ ಸಾಮಾಜಿಕ ಸೂಕ್ಷ್ಮಗಳನ್ನು ಚರ್ಚಿಸಿ.

**ಅಥವಾ**

ಜಡಪೂಜೆಗಿಂತ ಕಣ್ಣಪ್ಪನ ಅಸಾಂಪ್ರದಾಯಿಕ ಪೂಜೆ ಶಿವನಿಗೆ ಇಷ್ಟವಾಗುವುದರ ಹಿಂದಿರುವ ಸಾಮಾಜಿಕ ಪಲ್ಲಟಗಳನ್ನು ಚರ್ಚಿಸಿ.

2) ಗೌಡರ ಕುಟುಂಬವನ್ನು ಉಳಿಸುವಲ್ಲಿ ಲಿಂಗ ತೋರಿದ ಅಂತ:ಸತ್ವವನ್ನು ಕುವೆಂಪು ಎತ್ತಿ ಹಿಡಿಯುವ ಬಗೆಯಲ್ಲಿ ಯಾವ ನಿಲುವಿದೆ ? ವಿವರಿಸಿ.

**ಅಥವಾ**

ಅಸ್ಪೃಶ್ಯತಾಚರಣೆ ಹಾಗೂ ಆರೋಗ್ಯ ರಕ್ಷಣೆಯ ವಿಚಾರದಲ್ಲಿ ಮೇಲುಗೈ ಪಡೆಯುವ ಅಂಶ ಯಾವುದು ? ಲಂಕೇಶರ ಕತೆಯ ಹಿನ್ನೆಲೆಯಲ್ಲಿ ಚರ್ಚಿಸಿ.

3) ಕನ್ನಡ ಸಾಹಿತ್ಯದ ಅಭಿಮಾನಾಸ್ಪದ ವಿಷಯ ಯಾವುದು ? ಅದನ್ನು ಬರಗೂರರು ವಿಶ್ಲೇಷಿಸಿರುವ ರೀತಿಯನ್ನು ವಿವರಿಸಿ.

**ಅಥವಾ**

ಲಿಂಗ ತಾರತಮ್ಯದ ಅಂಶಗಳನ್ನು ಅಸ್ತಿತ್ವವಾದಿ ನೆಲೆಯಲ್ಲಿ ಹೇಗೆ ಚರ್ಚಿಸಲಾಗಿದೆ ? ಅಲೆಮಾರಿಗಳು ಪ್ರಬಂಧದ ಹಿನ್ನೆಲೆಯಲ್ಲಿ ವಿವರಿಸಿ.

4) 'ಮೀಡಿಯಾ ಮುಖ್ಯವಾಗಿ ತೀವ್ರ ಭಾವೋದ್ವೇಗವುಳ್ಳ ಹೆಣ್ಣೊಬ್ಬಳ ಕತೆ '. ಇದು ಈ ನಾಟಕದಲ್ಲಿ ಹೇಗೆ ಪ್ರತಿಪಾದಿತವಾಗಿದೆ.

**ಅಥವಾ**

ಕ್ರೆಯಾನ್, ಜೇಸನ್ ಮತ್ತು ಮೇಳ ಇವರಲ್ಲಿ ಎರಡು ಪಾತ್ರಗಳನ್ನು ಕುರಿತು ಬರೆಯಿರಿ.

# I Semester B.A./B.H.M. Examination, November/December 2010
## (Repeaters Scheme)
## ಕನ್ನಡ ಭಾಷಾ ಪತ್ರಿಕೆ - 1 (ಭಾಗ - 1)
## ಸಾಹಿತ್ಯ ಸಂವಾದ - ೧

Time : 3 Hours　　　　Max. Marks : 90

I. 1) ಐದು ಪದಗಳಿಗೆ ಅರ್ಥ ಬರೆಯಿರಿ.
ಅಧ್ಯಕ್ಷ, ಅಭಾವ, ಅಪರಾಧ, ಗಂಧ, ದಿನಪ, ನಯನ, ನಿರ್ದಿಷ್ಟ (1×5=5)

2) ಐದು ಪದಗಳಿಗೆ ಪರ್ಯಾಯ ಪದಗಳನ್ನು ಬರೆಯಿರಿ : (1×5=5)
ವದನ, ಅಡವಿ, ಭಾನು, ಧರಿತ್ರಿ, ಕಂದ, ಬಟ್ಟೆ ಕಣ್ಣು

3) ಐದು ಪದಗಳನ್ನು ಬಳಸಿಕೊಂಡು ಒಂದೊಂದು ವಾಕ್ಯ ರಚಿಸಿ. (1×5=5)
ಸ್ನೇಹ, ಒಗ್ಗಟ್ಟು, ಭಾಷಾಭಿಮಾನ, ಕೋರ್ಟು, ಹಾಸ್ಯ, ನಿರ್ಮೂಲನೆ, ಗೌರವ.

4) ಐದು ಜೋಡಿ ಅಥವಾ ಅನುಕರಣ ಪದಗಳನ್ನು ಬರೆಯಿರಿ. (1×5=5)

5) ನಾಲ್ಕು ಪದಗಳಿಗೆ ಮೂಲ ಪದಗಳನ್ನು ಸೂಚಿಸಿ. (1×4=4)
ಬನ, ಗ್ರಾಚಾರ, ಮಿಷನ್ನು, ಪರಪಂಚ, ಕಾಲೇಜು, ನಾಟ್ಕ, ಕ್ವಾಪ.

6) ಎರಡು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ : (2×3=6)
ದೇಶನೋಡು ಇಲ್ಲ ಕೋಶ ಓದು
ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು
ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ.

II. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : (4×5=20)

1) ಜೀವಸೃಷ್ಟಿಯ ರಹಸ್ಯಗಳನ್ನು ''ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು''– ಎಂಬ ಕಥೆಯ ಆಧಾರದಿಂದ ಬರೆಯಿರಿ.
2) 'ಹೆಣ್ಣು' ಕವಿತೆಯಲ್ಲಿ ಸಮೀಕರಣಗೊಳ್ಳುವ ವಿವಿಧ ರೂಪಗಳನ್ನು ಚಿಗರಿಗಂಗಳ ಚೆಲುವಿ– ಕವನದ ಹಿನ್ನೆಲೆಯಲ್ಲಿ ವಿವರಿಸಿ.
3) ಪರಿಸರದ ವರ್ಣನೆಯ ಮೂಲಕ ಪಂಪ ಏನನ್ನು ಹೇಳ ಬಯಸುತ್ತಾನೆ ?
4) 'ಕಟ್ಟುವೆವು ನಾವು' ಕವಿತೆಯಲ್ಲಿನ ಹೊಸನಾಡಿನ ಕಲ್ಪನೆಗಳೇನು ಎಂಬುದನ್ನು ವಿವರಿಸಿ.
5) ಭಾಷೆ ಎಂದರೇನು ? ಭಾಷಾಧ್ಯಯನದಲ್ಲಿ ವ್ಯಾಕರಣದ ಪ್ರಾಮುಖ್ಯತೆಯನ್ನು ವಿವರಿಸಿ.
6) 'ಅಜ್ಜಯ್ಯನ ಅಭ್ಯಂಜನ'– ಲೇಖನದ ಆಶಯವೇನು ?
7) ಬದುಕಿನ ನಾನಾ ಮುಖಗಳನ್ನು ಪರಿಚಯ ಮಾಡಿಕೊಡುವಲ್ಲಿ ಪ್ರಯಾಣದ ಪಾತ್ರವನ್ನು ಕುರಿತು ಚರ್ಚಿಸಿ.

III. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : (10×2=20)

1) ಒಂದು ಸಣ್ಣ ಕುತುಹಲವೂ ಅನೇಕ ರಹಸ್ಯಗಳನ್ನು ಬೇಧಿಸುವವರೆಗೆ ನಮ್ಮನ್ನು ಕೊಂಡೊಯ್ಯಬಹುದು – ಈ ಹೇಳಿಕೆ ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು ಕಥಾ ಭಾಗದಲ್ಲಿ ಹೇಗೆ ನಿರೂಪಿತವಾಗಿದೆ ?

2) 'ಹೂವಾದ ಹುಡಗಿ' ಕಥೆಯ ಆಶಯವೇನು ?

3) ರಾಷ್ಟ್ರ ನಿರ್ಮಾಣದಲ್ಲಿ ರಾಜಕೀಯ ಸಂಕಲ್ಪ ಶಕ್ತಿ ದೊಡ್ಡದೋ ಅಥವಾ ಯುವ ಶಕ್ತಿಯ ಸಂಕಲ್ಪ ಶಕ್ತಿ ದೊಡ್ಡದೋ ಚರ್ಚಿಸಿ.

4) ಮೃಗ ಮತ್ತು ಸುಂದರಿ ಕಥೆ ಅನಾವರಣ ಮಾಡುವ ಮನುಷ್ಯತ್ವದ ನೆಲೆಗಳನ್ನು ಚರ್ಚಿಸಿ.

IV. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾದ ಉತ್ತರ ಬರೆಯಿರಿ. (2×10=20)

1) ಕನ್ನಡ ಭಾಷೆಗೆ ಎದುರಾಗುವ ಸವಾಲುಗಳನ್ನು ಕುರಿತು ಬರೆಯಿರಿ.

2) 'ಆರಂಕುಶ ವಿಟ್ಟೊಡಂ ನೆನೆವುದೆನ್ನ ಮನಂ'–ಈ ಮಾತಿನಲ್ಲಿರುವ ಧ್ವನಿಯ ವಿಶೇಷತೆಯನ್ನು ಕುರಿತು ಬರೆಯಿರಿ.

3) ಆಧುನಿಕ ಬದುಕಿನ ವೇಗ ಮನುಷ್ಯನನ್ನು ಒಬ್ಬಂಟಿಯಾಗಿಸುತ್ತದೆ. 'ದೋಣಿ ಹರಿಗೋಲುಗಳಲ್ಲಿ'– ಈ ಲೇಖನದ ಹಿನ್ನಲೆಯಲ್ಲಿ ಚರ್ಚಿಸಿ.

4) ಪ್ರೀತಿ ಎಂದರೆ ಪಡೆಯುವುದಕ್ಕಿಂತ ನೀಡುವುದರಲ್ಲೆ ಹೆಚ್ಚು ಸುಖ ಎಂಬುದನ್ನು 'ಮೃಗ ಮತ್ತು ಸುಂದರಿ' ಕಥೆಯ ಆಧಾರದಿಂದ ಸ್ಪಷ್ಟಪಡಿಸಿ.

---